ಸಾಕ್ಷಿಯನ್ನು ದಿನಾಂಕ **20-08-2024** ರಂದು ಸತ್ಯಪ್ರಮಾಣ ಭೋಧಿಸಲಾಯಿತು.

ಪಾಟಿ ಸವಾಲು ಎದುರುದಾರ ಪರ ಶ್ರೀ ಪಿ ಎಂ ಹೆಚ್ ವಕೀಲರಿಂದ ಃ

ನಿವೇಶನ ಖರೀದಿ ಮಾಡುವುದಕ್ಕಿಂತ ಮೊದಲು ಎನ್ ಎ ಆದೇಶ ಪರಿಶೀಲನೆ ಮಾಡಿ ಖರೀದಿ ಮಾಡಿದ್ದೇನೆ. ಸನ್ 2002 ರಲ್ಲಿ ಸರ್ವೇ ನಂಃ 32/ಡಿ/1-2 ದಲ್ಲಿ ವಿನ್ಯಾಸ ಮಾಡಿದ್ದಾರೆ. 20 ಅಡಿಯ ಅಗಲದ ರಸ್ತೆಗಳು ಇವೆ, ಎಷ್ಟು ರಸ್ತೆಗಳು ಆ ಲೇಔಟಿನಲ್ಲಿ ಇವೆ ಎನ್ನುವುದು ಗೊತ್ತಿಲ್ಲ. ಸರ್ವೇ ನಂಃ 32/ಡಿ/1-2 ವಿಸ್ತೀರ್ಣ 02 ಎಕರೆ 09 ಗುಂಟೆ ಇದೆ. ಎಷ್ಟು ಸರ್ವೇ ನಂಬರುಗಳು ಸೇರಿ ಲೇಔಟ್ ಆಗಿದೆ ಎನ್ನುವುದು ಗೊತ್ತಿಲ್ಲ. ನಮ್ಮ ಲೇಔಟ್ ನಗರ ಯೋಜನಾ ಪ್ರಾಧಿಕಾರದಿಂದ ದೃಡೀಕೃತ ಆಗಿದೆ. ಆ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ನಗರ ಯೋಜನಾ ಪ್ರಾಧಿಕಾರದಿಂದ ನಮ್ಮ ಲೇಔಟ್ ಅಂಗೀಕಾರವಾಗದೇ ಅಂಗೀಕರಿಸಿದ್ದಾರೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಗರ ಯೋಜನಾ ಪ್ರಾಧಿಕಾರದಿಂದ ಅಂಗೀಕಾರವಾಗದೇ ನಮ್ಮದು ಅನಧೀಕೃತ ಲೇಔಟ್ ಅಂದರೆ ಸರಿಯಲ್ಲ. ಈ ಲೇಔಟಿನಲ್ಲಿ ನಿವೇಶನ ಸಂಖ್ಯೆಃ 112 ಮತ್ತು 10 ಅನ್ನು ಖರೀದಿ ಮಾಡಿದ್ದು, ಅವುಗಳ ಪೈಕಿ ನಿವೇಶನ ಸಂಖ್ಯೆಃ 112 ಭೂಸ್ವಾಧೀನ ಆಗಿದೆ. ನನ್ನ ನಿವೇಶನ 30 ಅಡಿ ಅಗಲದ ರಸ್ತೆಗೆ ಹೊಂದಿಕೊಂಡು ಇದೆ. ಇನ್ನೊಂದು ನಿವೇಶನ ಸಹಾ ರಸ್ತೆಗೆ ಹತ್ತಿಕೊಂಡು ಇದೆ. ನಿವೇಶನ ಸಂಖ್ಯೆಃ 112 ಇದರ ಅಳತೆ ಪೂರ್ವ- ಪಶ್ಚಿಮ 34 ಅಡಿ, ಉತ್ತರ-ದಕ್ಷಿಣ 20 ಅಡಿ ಇದೆ. ನಿವೇಶನ ಸಂಖ್ಯೆಃ10 ರ ಅಳತೆ 30X40 ಇರುತ್ತದೆ. ನಿವೇಶನ ಸಂಖ್ಯೆಃ 112 ಚೆಕ್ಕುಬಂದಿ ಪೂರ್ವಕ್ಕೆ ನನ್ನದೇ ನಿವೇಶನ ಸಂಖ್ಯೆಃ 10, ಪಶ್ಚಿಮಕ್ಕೆ 20 ಅಡಿ ರಸ್ತೆ, ಉತ್ತರಕ್ಕೆ ನಿವೇಶನ ಸಂಖ್ಯೆಃ 111 ಇದೆ. ಈ ನಿವೇಶನಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಆಗಿದೆ. ದಕ್ಷಿಣ ದಿಕ್ಕಿಗೆ ರಸ್ತೆ ಇದೆ. ಭೂಮಾಲೀಕರೇ ನಮ್ಮ ಸ್ವತ್ತನ್ನು ಅಭಿವೃದ್ಧಿ ಮಾಡಿದ್ದಾರೆ. ಸರ್ವೆ ನಂಃ 32/ಡಿ ಗೆ ಸಂಬಂಧಪಟ್ಟಂತೆ ಲೇಔಟ್ ನಗರ ಯೋಜನಾ ಪ್ರಾಧಿಕಾರದಿಂದ ದೃಡೀಕೃತ ಆಗದೇ ಇದ್ದರೂ ಸಹ ಭೂಮಾಲೀಕರು ಜೆರಾಕ್ಸ್ ಲೇಔಟ್ ಪ್ರತಿಗೆ ನಗರಸಭೆ ಸೀಲು ಹಾಕಿ ನ್ಯಾಯಾಲಯಕ್ಕೆ

ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ನಗರ ಯೋಜನಾ ಪ್ರಾಧಿಕಾರ, ಗಂಗಾವತಿ ಇವರಿಂದ ಲೇಔಟ್ ಅಂಗೀಕಾರವಾಗಿದೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿದ್ದೇನೆ. ನಿಪಿ-11 ನಾನು ಹಾಜರುಮಾಡಿದ್ದು, ಅದು ನನ್ನ ಲೇಔಟ್ ಮ್ಯಾಪ್ ಅಲ್ಲ. ನಿಪಿ-16 ಕ್ರಯಪತ್ರದಲ್ಲಿ ತೋರಿದ ನಿವೇಶನ ರಸ್ತೆಗೆ ಹೊಂದಿಕೊಂಡು ಇಲ್ಲ, ನಮ್ಮ ಖುಷಮಣಿ ನಗರದ ಪಶ್ಚಿಮಕ್ಕೆ ಈ ನಿವೇಶನ ಇದೆ. ನಿಪಿ-16 ರಲ್ಲಿ ತೋರಿದ ನಿವೇಶನ ಸ್ವಾಧೀನವಾಗಿದ್ದು, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರೂ.2,200/- ಪ್ರತೀ ಚ. ಅಡಿಗೆ ಆದೇಶವಾಗಿರುವುದರಿಂದ ಇದರ ಪ್ರತಿಯನ್ನು ಹಾಜರುಪಡಿಸಿದ್ದೇನೆ. ನಿಪಿ-16 ಮತ್ತು 17 ರಲ್ಲಿ ತೋರಿಸಿದ ನಿವೇಶನಗಳು ಗಂಗಾವತಿಯ ಸಿ ಬಿ ಎಸ್ ಸರ್ಕಲ್ ನಿಂದ ಕೊಪ್ಪಳ ಮುಖ್ಯ ರಸ್ತೆಗೆ ಹೊಂದಿಕೊಂಡಿವೆ ಎಂದರೆ ಸಾಕ್ಷಿ ನಮ್ಮ ಲೇಔಟಿಗೆ ಹೊಂದಿಕೊಂಡು ಇವೆ ಎಂದು ನುಡಿಯುತ್ತಾರೆ. ಈ ನಿವೇಶನಗಳನ್ನು ಸರಕಾರ ಸ್ವಾಧೀನ ಮಾಡಿಲ್ಲ, ಇವು ರಿಲೈಯನ್ಸ್ ಕಂಪನಿಯ ನಿವೇಶನಗಳು ಎಂದರೆ ಸಾಕ್ಷಿ ಇವುಗಳು ಸ್ವಾಧೀನ ಆಗಿವೆ ಎಂದು ನುಡಿಯುತ್ತಾರೆ.

ಶ್ರೀಕಾಂತ ನಾರಾಯಣಪ್ಪ ಗೋವೇಕರ್ ಇವರ ಕ್ರಯಪತ್ರ ಹಾಜರುಪಡಿಸಿದ್ದು, ಅವರ ನಿವೇಶನ ಸಂಖ್ಯೆಃ 66 ಇರುತ್ತದೆ. ನಾನು ನಿವೇಶನವನ್ನು 2003 ರಲ್ಲಿ ಖರೀದಿ ಮಾಡಿದ್ದೇನೆ. ನನ್ನ ಖರೀದಿ ಪತ್ರ ಹಾಜರುಪಡಿಸಿದ್ದೇನೆ. ದಿಃ 30-09-2009 ರಂದು ರೈಲ್ವೇ ಇಲಾಖೆಯ 4(1) ನೊಟಿಫಿಕೇಷನ್ ಆಗಿತ್ತು ಎಂದರೆ ಸರಿ. ಸ್ವಾಧೀನ ಆಗುವಾಗ ನನ್ನ ಹೆಸರಿನಲ್ಲಿ ನಿವೇಶನ ಇತ್ತು. ಸನ್ 2003 ರಲ್ಲಿ ರೂ. 5 ಲಕ್ಷಕ್ಕೆ ನಿವೇಶನ ಖರೀದಿ ಮಾಡಿದ್ದು, ಕ್ರಯಪತ್ರದಲ್ಲಿ ಸರಕಾರಿ ಮೌಲ್ಯವನ್ನು ತೋರಿಸಿದ್ದೇನೆ. ಖರೀದಿ ಪತ್ರವನ್ನು ಸಿಂಧನೂರು ಕಛೇರಿಗೆ ನೀಡಿದ್ದೇವೆ. ಅದರ ನಕಲು ಹಾಜರುಪಡಿಸಿದ್ದೇನೆ. ಒಟ್ಟು 680 ಚ. ಅಡಿಗೆ ಸರಕಾರಿ ಮಾರುಕಟ್ಟೆ ಬೆಲೆ ರೂ. 34 ಸಾವಿರ ಇತ್ತು. ಕ್ರಯಪತ್ರದಲ್ಲಿ ರೂ. 5 ಲಕ್ಷಕ್ಕೆ ಕ್ರಯ ಮಾಡಿದ್ದೇನೆ ಅಂತ ಬರೆಸಿಲ್ಲ. ಪ್ರತೀ ಚ. ಅಡಿಗೆ ರೂ. 143/- ಬೆಲೆ ಭೂಸ್ವಾಧೀನಾಧಿಕಾರಿಗಳು ನಿಗಧಿ ಮಾಡಿದ್ದರು. ದಿಃ 08-10-2015 ರಂದು ಪರಿಹಾರದ ಹಣವನ್ನು ಪಡೆದಿದ್ದೇನೆ. ನಿಪಿ-38 12(2) ನೊಟೀಸು ದಿಃ 08-10-2015 ರಂದು

ತಲುಪಿದೆ, ಆ ಪ್ರಕಾರ ನಾನು ಸಹಿ ಮಾಡಿದ್ದೇನೆ. ಭೂಸ್ವಾಧೀನಾಧಿಕಾರಿಗಳು ಮೊದಲು ಯಾವಾಗ ಆದೇಶ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಋಷಮಣಿ ನಗರದಲ್ಲಿ 2009 ರಲ್ಲಿ ರೂ. 2,200/- ಪ್ರತೀ ಚ. ಅಡಿ ಬೆಲೆಗೆ ಯಾವುದಾದರೂ ನಿವೇಶನಗಳು ಮಾರಾಟವಾದ ಬಗ್ಗೆ ದಾಖಲಾತಿಗಳು ಹಾಜರುಪಡಿಸಿಲ್ಲ. 2009 ರಿಂದ 2024 ರ ಅವಧಿಯಲ್ಲಿ ಋಷಮಣಿ ನಗರದ ನಿವೇಶನಕ್ಕೆ ಸಂಬಂಧಪಟ್ಟಂತೆ ಕ್ರಯಪತ್ರ ಹಾಜರುಪಡಿಸಿಲ್ಲ, ಆದರೆ ರಿಲೈಯನ್ಸ್ ಕಂಪನಿಯದ್ದು ಹಾಜರುಪಡಿಸಿದ್ದೇನೆ. ನಮ್ಮದು ಅಭಿವೃದ್ಧಿ ಹೊಂದದ ಲೇಔಟ್ ಆಗಿರುವುದರಿಂದ ಪ್ರತೀ ಚ. ಅಡಿಗೆ ರೂ. 143 ರಿಂದ 150 ಆಗುತ್ತಿದ್ದು, ಈಗಾಗಲೇ 1 ನೇ ಎದುರುದಾರ ನೀಡಿದ ಬೆಲೆ ಸರಿಯಾಗಿದೆ ಎಂದರೆ ನಿಜವಲ್ಲ. ರೂ. 2,200/- ರಿಂದ ರೂ. 3000/- ಬೆಲೆ ಯಾವ ಸ್ವತ್ತು ಗಂಗಾವತಿಯಲ್ಲಿ ಮಾರಾಟವಾಗಿಲ್ಲ, ಅತೀ ಹೆಚ್ಚಿನ ಬೆಲೆ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ನಿವೇಶನದ ಉತ್ತರಕ್ಕೆ ಎನ್ ಜಿ ಓ ದವರು ನಿವೇಶನಗಳನ್ನು ಮಾಡಿರುವುದನ್ನು ನಾನು ಗಮನಿಸಿಲ್ಲ. ಕನಕಗಿರಿ ರಸ್ತೆಗೆ ನಿವೇಶನಗಳ ಬೆಲೆ ಕಡಿಮೆಯಾಗಿರುವುದರಿಂದ ಅತೀ ಹೆಚ್ಚಿನ ಬೆಲೆ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.